# 'ಎಡವಿದರೂ ಸರಿಯಾದ ಮಾರ್ಗ ನಮ್ಮದಾಗಲಿ



**ಸ್ಕಂದ ಅಶೋಕ್**
ಸ್ಟಾರ್ ಸುವರ್ಣದ 'ಅವನು ಮತ್ತು ಶ್ರಾವಣಿ'ಯ ಅಭಿ

◆ **ರಿಯಲ್ ನಾಯಕ ಮತ್ತು ರೀಲ್ ನಾಯಕನ ನಡುವೆ ಸಾಮ್ಯತೆ ಏನು?**

ತೆರೆಯಲ್ಲಿ ಮೆರೆಯುವ ನಡವಳಿಕೆಯನ್ನು ರಿಯಲ್ ಬದುಕಿನಲ್ಲಿಯೂ ಪಾಲಿಸಬೇಕು. ತೆರೆಯಲ್ಲಿ ಬೇರೆ ಬೇರೆ ಪಾತ್ರಗಳನ್ನು ಮಾಡುತ್ತೇವೆ. ನಮ್ಮ ಅಭಿನಯದ ಗುಣಗಳನ್ನು ಜನ ಸ್ವೀಕರಿಸುತ್ತಾರೋ ಇಲ್ಲವೋ ಎನ್ನುವುದು ಅವರ ಆಯ್ಕೆಗೆ ಬಿಟ್ಟ ವಿಷಯ. ಆದರೆ ನಟನೊಬ್ಬ ಸಮಾಜಮುಖಿಯಾಗಿ ಇರಬೇಕು. ಸಮಾಜಕ್ಕೆ ಮಾದರಿಯಾಗಿ ಇರುವಂತೆ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಬೇಕು. ನಮ್ಮ ಜೀವನಶೈಲಿ ಕೆಲವೊಮ್ಮೆ ಮತ್ತೊಬ್ಬರಿಗೆ ಮಾದರಿ ಆಗುವ ಸಾಧ್ಯತೆ ಇರುತ್ತದೆ. ಈ ಕಾರಣಕ್ಕೆ ರಿಯಲ್ ಜೀವನದಲ್ಲಿಯೂ ನಾಯಕನಾಗಿಯೇ ಇರಬೇಕು. ತೆರೆಗೂ ವಾಸ್ತವಕ್ಕೂ ತುಂಬ ಅಂತರ ಇರಬಾರದು. ಕೆಲವೊಂದು ಸಮಯದಲ್ಲಿ ನಾವೂ ಎಡವಬಹುದು. ತಕ್ಷಣ ಎಚ್ಚೆತ್ತುಕೊಂಡು ಅದನ್ನು ತಿದ್ದಿಕೊಳ್ಳಬೇಕು. ಸರಿಯಾದ ಮಾರ್ಗದಲ್ಲಿ ಸಾಗುವುದು ಒಳಿತು.

◆ **ನಿಮ್ಮ ಪರಿಚಯ ಹೇಳಿ?**

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ – ಬೇಲೂರು ಮಾರ್ಗ ಮಧ್ಯದ ಚೀಕನಹಳ್ಳಿ ಎಂಬ ಗ್ರಾಮದಲ್ಲಿ ಬೆಳೆದದ್ದು. ನಮ್ಮದು ರೈತ ಕುಟುಂಬ. ತಾಯಿ, ಅಪ್ಪ ರಾಜಕಾರಣದಲ್ಲಿ ಇದ್ದರು. ನಾನು ಕೃಷಿ ಮಾಡಬೇಕು ಇಲ್ಲವೇ ಯಾವುದಾದರೂ ಉದ್ಯಮ ಆರಂಭಿಸಬೇಕು ಎನ್ನುವ ಲೆಕ್ಕಾಚಾರದಲ್ಲಿ ಇದ್ದೆ. ಆದರೆ ನನಗೆ ಕ್ರಿಕೆಟ್ ಪ್ಯಾಶನ್ ಆಗಿತ್ತು. ಅದರ ಹುಚ್ಚು ವೃತ್ತಿಪರವಾಗಿ ಆಡಬೇಕು ಎನ್ನುವ ಅಭಿಲಾಷೆಯನ್ನು ಹುಟ್ಟಿಸಿತ್ತು. ವೈಲ್ಡ್ ಲೈಫ್ ಫೋಟೊಗ್ರಾಫರ್ ಸೇನಾನಿ ನನ್ನ ಸಂಬಂಧಿ. ಅವರ ಜೊತೆ ನನ್ನ ಆಸೆಯನ್ನು ಹಂಚಿಕೊಂಡೆ. ಅವರು ಓದುವುದನ್ನು ಮೊದಲು ಮುಗಿಸಲು ಹೇಳಿದರು. ಒಮ್ಮೆ ರಾಜ್ಯಮಟ್ಟದ ತಂಡದಲ್ಲಿ ಆಡಿದೆ. ಆಗ ಅಲ್ಲಿನ ಸವಾಲು ಕಷ್ಟ ಎನ್ನುವುದು ಗೊತ್ತಾಯಿತು. ಆಗ ಬಿಬಿಎ ಓದುತ್ತಿದ್ದೆ. ಪಿಯು ಮಾಡುವಾಗಲೇ ಜಾಹೀರಾತಿನಲ್ಲಿ ಕಾಣಿಸಿಕೊಳ್ಳುವ ಒಂದು ಅವಕಾಶ ಬಂದಿತ್ತು. ತುಂಬ ಸಂಕೋಚ ಸ್ವಭಾವದ ನಾನು ಆ ಜಾಹೀರಾತು ನನ್ನದಲ್ಲ ಎಂದು ಹೇಳುತ್ತಿದ್ದೆ.

ಅದೆಲ್ಲೋ ನನ್ನೊಳಗೆ ಕ್ಯಾಮೆರಾ ಪ್ರೀತಿ ಹುಟ್ಟಿಸಿತ್ತು. ನಂತರ ಮಲೆಯಾಳಂನಲ್ಲಿ 'ನೋಟ್‌ಬುಕ್' ಸಿನಿಮಾಕ್ಕೆ ಅವಕಾಶ ಬಂದಿತು. ಅದು ಸಿಕ್ಕಾಪಟ್ಟೆ ಹಿಟ್ ಆಯಿತು. ಮಾತ್ರವಲ್ಲದೆ ದೊಡ್ಡ ಅವಕಾಶವನ್ನು ತಂದುಕೊಟ್ಟಿತು. ತೆಲುಗು, ತಮಿಳು ಸಿನಿಮಾಗಳಲ್ಲಿ ಮಾಡಿದೆ. ಆಗ ಕನ್ನಡದಲ್ಲಿ ಮಾಡುವುದು ಯಾವಾಗ ಎಂದು ಯೋಚಿಸುತ್ತಿದ್ದೆ. ಅದೇ ಸಮಯದಲ್ಲಿ ದ್ವಾರಕೀಶ್ ಅವರ ಮಗ ಯೋಗಿ 'ವಿಷ್ಣುವರ್ಧನ್' ಕತೆಯನ್ನು ಪ್ಲಾನ್ ಮಾಡಿದರು. ಅದನ್ನು ಸುದೀಪ್ ಇಷ್ಟಪಟ್ಟು ಮಾಡಿದರು. ನಂತರ ಅವರು ನನಗಾಗಿಯೇ 'ಚಾರುಲತಾ' ಮಾಡಿದರು. ಮತ್ತೆ ತಮಿಳಿನತ್ತ ಮುಖ ಮಾಡಿದೆ. ಅದೇ ಸಮಯದಲ್ಲಿ ಕಲರ್ಸ್ ಕನ್ನಡದವರು ಸಂಪರ್ಕಿಸಿದರು. ನಾನು ಧಾರಾವಾಹಿಗೆ ಬರಲ್ಲ ಎನ್ನುವುದನ್ನು ತಿಳಿದ ಅವರು ನನ್ನ ಗೆಳೆಯನ ಮೂಲಕ ಕಾರ್ಯಕ್ರಮ ನಿರೂಪಣೆಗೆ ಎಂದು ಕರೆಸಿಕೊಂಡರು. ಮಾತ್ರವಲ್ಲದೆ ನನ್ನನ್ನು ಒಪ್ಪಿಸಿದರು ಕೂಡ.

◆ **ಕಿರುತೆರೆಗೆ ಬಂದಾಗ ನಿಮಗೆ ಏನೆನಿಸಿತು?**

ಸೀರಿಯಲ್ ಬಗ್ಗೆ ಮಾಹಿತಿ ಇರಲಿಲ್ಲ. ಅದರ ತಾಂತ್ರಿಕ ಸಂಗತಿಯೂ ಗೊತ್ತಿರಲಿಲ್ಲ. ನಮ್ಮ ಮನೆಯಲ್ಲಿಯೂ ಅನುಕೂಲ ಇದ್ದಿದ್ದರಿಂದ ಬೇರೆ ಜವಾಬ್ದಾರಿ ಇರಲಿಲ್ಲ. ಸಂಪಾದನೆಯ ಒತ್ತಡವೂ ಇರಲಿಲ್ಲ. ಮಾತ್ರವಲ್ಲ, ಚಿತ್ರರಂಗದಲ್ಲಿ ಗಾಡ್ ಫಾದರ್ ಎಂದು ಯಾರೂ ನನಗಿರಲಿಲ್ಲ. ನನ್ನದೇ ನಿರ್ಧಾರ, ಸರಿ ತಪ್ಪುಗಳನ್ನು ಮಾಡಿಕೊಳ್ಳುತ್ತಾ ಮುಂದೆ ಸಾಗುತ್ತಾ ಬಂದಿದ್ದೇನೆ. 'ರಾಧಾ ರಮಣ' ಮಾತುಕತೆಯ ಸಮಯಕ್ಕೆ ತಮಿಳಿನಲ್ಲಿ ದೊಡ್ಡ ಸಿನಿಮಾಕ್ಕೆ ಅವಕಾಶ ಬಂದಿತ್ತು. ಎರಡರಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಿತ್ತು. 'ರಾಧಾ ರಮಣ' ಭಿನ್ನವಾಗಿದೆ ಎಂದೆನಿಸಿತು. ಕಲರ್ಸ್ ತಂಡ ತೋರಿದ ಉತ್ಸಾಹ ಸಿನಿಮಾಕ್ಕಿಂತ ಜೋರಾಗಿ ಮಾಡುತ್ತಿದ್ದಾರೆ ಎನ್ನುವ ನಂಬಿಕೆಯನ್ನು ಹುಟ್ಟಿಸಿತು. ಮದುವೆಯೊಂದಕ್ಕೆ 80 ಲಕ್ಷ ಖರ್ಚು ಮಾಡಿದ್ದರು. ದೇವರ ಮೇಲೆ ಭಾರ ಹಾಕಿ ಅದನ್ನು ಮಾಡಲು ಶುರುಮಾಡಿದೆ. ಅದೇ ಸಮಯದಲ್ಲಿ ನನ್ನ ಇಬ್ಬರೂ ಅಜ್ಜಿಯರು ತೀರಿದರು. ಸಾಯುವ ಮುಂಚೆ ಅವರನ್ನು ನೋಡಿ ಹೋಗಿದ್ದರಿಂದ ಅಂತಿಮ ಸಂಸ್ಕಾರಕ್ಕೂ ಹೋಗುವ ರಿಸ್ಕ್ ತೆಗೆದುಕೊಳ್ಳಲಿಲ್ಲ. ನನ್ನ ತಾಯಿ 'ಕಾಯಕವೇ ಕೈಲಾಸ ಅದನ್ನೇ ಮಾಡು ಮಗನೆ ನಿಮ್ಮ ಅಜ್ಜಿ ಕೂಡ ಅದನ್ನೇ ಬಯಸುತ್ತಿದ್ದರು' ಎಂದು ಹೇಳಿದರು. ಐದು ದಿನದ ಚಿತ್ರೀಕರಣದ ಉದ್ದೇಶ ಒಂಬತ್ತು ದಿನಗಳನ್ನು ತೆಗೆದುಕೊಂಡಿತ್ತು. ನನ್ನಿಂದ ಮತ್ತೆರಡು ದಿನ ಹೆಚ್ಚಾಗಬಾರದು, ಯಾರಿಗೂ ಹೊರೆಯಾಗಬಾರದು ಎಂದು ಚಿತ್ರೀಕರಣದಲ್ಲೇ ತೊಡಗಿದೆ. ಅದರ ಮೂಲಕವೇ ನಾನು ಮನೆಮಾತಾಗಲು ಸಾಧ್ಯವಾಯಿತು.

■ **ರಾಘವೇಂದ್ರ ಕೆ.**